


**ರಾಮಮನೋಹರ ಲೋಹಿಯಾ ಜೀವನಯಾನ**

■ ನಟರಾಜ್ ಹುಳಿಯಾರ್
ಕಲೆ: ಎಚ್‌ಎಸ್‌. ಮೋನಪ್ಪ

# ಸಮಾಜವಾದಿ ಕಂಡ ಸ್ತ್ರೀಲೋಕ

## ದ್ರೌಪದಿ, ಸಾವಿತ್ರಿ, ಸೀತೆ, ರತಿ, ಅಕ್ಕಮಹಾದೇವಿ...

‘ದ್ರೌಪದಿಯೋ? ಸಾವಿತ್ರಿಯೋ? ನನ್ನ ನೆಚ್ಚಿನ ಆಯ್ಕೆ ಯಾವುದು?’

ಈ ಪ್ರಶ್ನೆ ಲೋಹಿಯಾಗೆ ಒಮ್ಮೆ ಎದುರಾಗುತ್ತದೆ:

‘ದ್ರೌಪದಿ ಮತ್ತು ಸಾವಿತ್ರಿ ಎಂಬ ಇಬ್ಬರು ಮಹಿಳೆಯರೂ ಕಾಲ್ಪನಿಕವೇ ಆಗಿರಬಹುದಾದ ಸಾಧ್ಯತೆಗಳು ಹೆಚ್ಚಾಗಿವೆ. ಅಥವಾ, ಯಾವುದೋ ಸ್ವರೂಪದಲ್ಲಿ ಇವರು ಇದ್ದಿರಲೂಬಹುದು. ಕಾಲ ಉರುಳಿದಂತೆ ಅನೇಕ ಕತೆಗಳು ಅವರ ಸುತ್ತ ಹೆಣೆದುಕೊಂಡಿರಲೂಬಹುದು. ಅಥವಾ ನಾಲ್ಕಾರು ಹೆಂಗಸರ ಕತೆಗಳು ಒಟ್ಟಾಗಿ ಒಬ್ಬ ಹೆಂಗಸಿನ ಖಾತೆಗೆ ಸೇರಿರಬಹುದು.

...ಪತಿವ್ರತೆ ಶಬ್ದಕ್ಕೆ ಸಾವಿತ್ರಿ ಸಂಕೇತವಾಗಿಬಿಟ್ಟಿದ್ದಾಳೆ. ದಂತಕತೆಯ ಪ್ರಕಾರ, ಆಕೆ ತನ್ನ ಗಂಡನನ್ನು ಎಷ್ಟು ಗಾಢವಾಗಿ ಪ್ರೀತಿಸುತ್ತಿದ್ದಳು ಹಾಗೂ ಎಂಥ ಪತಿವ್ರತೆಯಾಗಿದ್ದಳು ಅಂದರೆ ಗಂಡ ಸತ್ತಾಗ ಯಮನ ಕೈಯಿಂದ ಅವನನ್ನು ಬಿಡಿಸಿಕೊಂಡು ಬಂದಳಂತೆ; ಅವನನ್ನು ಇನ್ನೊಮ್ಮೆ ಬದುಕಿಸಿಕೊಂಡಳಂತೆ.

‘ಹಿಂದೂ ಮಹಿಳೆಯರ ಮತ್ತು ಪುರುಷರ ಹೃದಯಗಳು ಸಾವಿತ್ರಿಯ ಬಗೆಗೆ ಥಟ್ಟನೆ ಭಾವುಕವಾಗಿ ಬಿಡುತ್ತವೆ; ‘ಅಬ್ಬಾ! ಎಂಥ ಅಚ್ಚರಿ ಹುಟ್ಟಿಸುವ ಹೆಣ್ಣು ಈಕೆ!’ ಎಂದು ಉದ್ಗರಿಸುತ್ತವೆ. ಹೆಂಗಸರಂತೂ ಈ ಭಾವನಾಪ್ರಪಂಚದಲ್ಲಿ ಮುಳುಗಿಬಿಡುತ್ತಾರೆ...

‘ವಿಷಾದದ ಸಂಗತಿಯೆಂದರೆ, ದ್ರೌಪದಿಗೆ ಐವರು ಗಂಡಂದಿರಿದ್ದರು ಎಂಬ ಮಾತನ್ನೇ ಮುಂದು ಮಾಡಿ ಇವತ್ತಿನ ಭಾರತದ ಗಂಡಸರು, ಹೆಂಗಸರು ಈಕೆಯನ್ನು ನೆನಪಿನಲ್ಲಿಟ್ಟುಕೊಂಡಿದ್ದಾರೆ. ಈಕೆಗೆ ಐವರು ಗಂಡಂದಿರಿದ್ದರೋ, ಆರು ಜನ

